ಮಾಡಿಕೊಳ್ಳದ ಮೊದಲು ಇರುವ ಡಾಕ್ಟರುಗಳನ್ನು ರಿಲೀವ್ ಮಾಡಬಾರದು ಎನ್ನುವ ಬಗ್ಗೆ ಸರ್ಕಾರ ಪಾಲಿಸಿ ಡಿಸಿಷನ್ ತೆಗೆದುಕೊಳ್ಳುತ್ತದೆಯೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:– ಶಿಕಾರಿಪುರ ಆಸ್ಪತ್ರೆಯನ್ನು 100 ಹಾಸಿಗೆ ಆಸ್ಪತ್ರೆಯಾಗಿ ಪರಿವರ್ತನೆ ಮಾಡುವುದಕ್ಕೆ ಈಗ ತಾನೇ ನಮ್ಮ ಸರ್ಕಾರದ ಮುಂದೆ ಅದು ಇದೆ, ಅದನ್ನು ಬೇಗನೆ ಮಾಡುತ್ತೇವೆ. ಮತ್ತೆ ಸದಸ್ಯರು ಒಂದು ಸಲಹೆ ಕೊಟ್ಟಿದ್ದಾರೆ. ಒಬ್ಬರು ಡಾಕ್ಟರನ್ನು ರಿಲೀವ್ ಮಾಡುವುದಕ್ಕೆ ಮುಂಚೆ ಇನ್ನೊಬ್ಬರು ಡಾಕ್ಟರು ಅಲ್ಲಿ ರಿಪೋರ್ಟ್ ಮಾಡಿಕೊಂಡಿರಬೇಕೆಂದು ಹೇಳಿದ್ದಾರೆ. ಅದು ಬಹಳ ಒಳ್ಳೆಯ ಸಲಹೆ. ಇದನ್ನು ನಾವು ಗಮನಿಸಿ ಅದನ್ನು ಪಾಲನೆ ಮಾಡುವುದಕ್ಕೆ ನೋಡುತ್ತೇವೆ.

ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳ ಸೆನೆಟ್ – ಸಿಂಡಿಕೇಟ್‌ಗೆ ನಾಮ ನಿರ್ದೇಶನಗಳು

308 (1598): ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ):–

ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಿಶಿಷ್ಟ ಜಾತಿಯನ್ನು ರಾಜ್ಯದ ವಿಶ್ವವಿದ್ಯಾಲಯಗಳ ಸೆನೆಟ್, ಸಿಂಡಿಕೇಟ್ ಮತ್ತು ಇತರೆ ನಿಕಾಯಗಳಲ್ಲಿ ಪ್ರತಿನಿಧಿಸುವ ಸಲುವಾಗಿ ವಿಶ್ವವಿದ್ಯಾಲಯದ ಆಡಳಿತ ವರ್ಗದ ಶಿಫಾರಸ್ಸಿನ ಮೇಲೆ ಅಲ್ಲಿನ ಸಿಬ್ಬಂದಿ ವರ್ಗದಿಂದ ಕೆಲವು ನೇಮಕಾತಿಗಳನ್ನು ಮಾಡುತ್ತಿರುವುದು ನಿಜ ಅಲ್ಲ ಅಲ್ಲವೆ ?

ಆ) ಈ ದಿಸೆಯಲ್ಲಿ ಸರ್ಕಾರವು ಸೂಕ್ತ ತಿದ್ದುಪಡಿಗಳನ್ನು ಮಾಡುವುದೆ ? ಹಾಗಿದ್ದಲ್ಲಿ ಸರ್ಕಾರವು ಅನುಭವಸ್ಥ ಮತ್ತು ವಿದ್ಯಾವಂತ ಪರಿಶಿಷ್ಟ ಜಾತಿಯ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುವುದೇ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):–

ಅ) ವಿಶ್ವವಿದ್ಯಾಲಯಗಳ ಸೆನೆಟ್, ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿಗಳಿಗೆ ಅಲ್ಲಿನ ಸಿಬ್ಬಂದಿ ಅಥವಾ ಇತರರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 1976ರ ಉಪಬಂಧಗಳ ಪ್ರಕಾರ ನೇಮಕ ಮಾಡಲಾಗುವುದು.

ಆ) ಇಲ್ಲ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 1976ರ ಪ್ರಸ್ತುತ ಇರುವ ಅನುಬಂಧಗಳಲ್ಲಿ ಪರಿಶಿಷ್ಟ ಜಾತಿಯ ಸದಸ್ಯರನ್ನು ವಿಶ್ವವಿದ್ಯಾಲಯಗಳ ನಿಕಾಯಗಳಿಗೆ ನೇಮಕ ಮಾಡಲು ಸಾಕಷ್ಟು ಅವಕಾಶವಿರುತ್ತದೆ.

ಶ್ರೀ ಕೆ. ಸಿದ್ದಯ್ಯ:– ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ಪ್ರಸ್ತುತ ಇರುವ ಅನುಬಂಧದಲ್ಲಿ ಪರಿಶಿಷ್ಟ ಜಾತಿಯ ಸದಸ್ಯರನ್ನು ವಿಶ್ವವಿದ್ಯಾಲಯಗಳ ಬಾಡಿಗಳಿಗೆ ನೇಮಕ ಮಾಡಲು ಸಾಕಷ್ಟು ಅವಕಾಶ ಇದೆ ಎಂದು ಹೇಳಿದ್ದಾರೆ. ಈ ಅವಕಾಶ ಇದೆ ಎಂದು ನನಗೂ ಗೊತ್ತು. ಆದರೆ ನಾನು ಕೇಳುವುದು ಇಷ್ಟೇ. ಈ ಸಂಸ್ಥೆಗಳಿಗೆ, ಸಿಂಡಿಕೇಟ್ ಮಗ್ಗೆರೆಗಳಿಗೆ ವಿದ್ಯಾವಂತ ಪರಿಶಿಷ್ಟ ಜಾತಿಯ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ:– ಮಾನ್ಯ ಸದಸ್ಯರು ಯಾವ ವಿಚಾರ ಹೇಳುತ್ತಿದ್ದಾರೆ, ಅಧಿಕಾರದವರು ಸ್ಟ್ಯಾಫ್ ಮೆಂಬರ್ಸ್ ಇರಬಾರದೆಂದು, ನಮ್ಮ ಸರ್ಕಾರದ ನೀತಿ ಸಹ ಅದು ಆಗಿದೆ. ಸಿಂಡಿಕೇಟ್‌ನಲ್ಲಿ

ಮೂವರಲ್ಲಿ ಒಬ್ಬರನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ನಾಮಿನೇಟ್ ಮಾಡುತ್ತಾರೆ. ಚಾನ್ಸಲರ್ ಅವರು in consultation with the Government ಮಾಡುತ್ತಾರೆ. ಅದು ಸರಿ ಹೋಗುತ್ತದೆ. ಅಕಾಡೆಮಿಕ್ ಕೌನ್ಸಿಲ್‌ನಲ್ಲಿ 15ರಲ್ಲಿ 6 ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಒಂದು ಷೆಡ್ಯೂಲ್ಡ್ ಟ್ರೈಬ್ ಇಟ್ಟಿದ್ದೇವೆ. ಅದು ಸ್ವಲ್ಪ ಪ್ರೊಫೆಸರ್ ಇದ್ದವರಿಗೆ ಬೇರೆಯವರಿಗ ನಾನ್ ಅಫಿಷಿಯಲ್ಸ್‌ಗೆ ಮಾಡಬಹುದು. That too, Chancellor in consultation with the Government ಮಾಡುತ್ತಾರೆ. ಸೆನೆಟ್‌ನಲ್ಲಿ 15 ಮಾಡುವಾಗ ವೈಸ್ ಛಾನ್ಸಲರ್ ಮತ್ತು ಛಾನ್ಸಲರ್ ಒಟ್ಟಿಗೆ ಮಾಡುತ್ತಾರೆ; ಸರ್ಕಾರಕ್ಕೆ ಬರುವುದಿಲ್ಲ. ಆಗ ತಪ್ಪುಗಳು ಆಗುತ್ತವೆ. ಏಕೆಂದರೆ ಅಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಹೊರಗಿನವರು ಇವ್ವರೆ, ನಾನ್ ಸ್ಟ್ಯಾಫ್ ಮೆಂಬರ್ ಇದ್ದರೆ ಧೈರ್ಯವಾಗಿ ಕೇಳಬಹುದು. ಅಲ್ಲಿಯವರು ಇರಬಾರದೆಂದು ಸರ್ಕಾರದ ಉದ್ದೇಶ ಕೂಡ ಇದೆ. ಇದರಲ್ಲಿ Chancellor in consultation with the State Government ಇದ್ದರೆ ಉತ್ತಮ ಎಂದು ಯೋಚನೆ ಮಾಡುತ್ತಿದ್ದೇವೆ. ಅದರಲ್ಲಿ ಸಾಧ್ಯವಾದರೆ ಅಮೆಂಡ್‌ಮೆಂಟ್ ತಂದು ಆ ರೀತಿ ಎಲ್ಲರೂ ಅಥವಾ ಹೆಚ್ಚಿಗೆ ನಾನ್ ಅಫಿಷಿಯಲ್ಸ್ ಇರುವ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡುತ್ತೇವೆ. ಎಲ್ಲರೂ ಇದ್ದರೆ ಒಳ್ಳೆಯದೆಂದು ಕಾಣುತ್ತದೆ.

ಶ್ರೀ ಕೆ. ಸಿದ್ದಯ್ಯ:– ಎಷ್ಟು ರೆಪ್ರಸಂಟೇಷನ್ ಇರುತ್ತದೆ, ಯಾವ ರೀತಿ ಪ್ರೊಸೀಜರ್ ಇದೆ ಎಂದು ಹೇಳಿದಿರಿ. ಆ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಎಜುಕೇಟೆಡ್ ಪೀಪಲ್ ಬೇಕಾದಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟನಲ್ಲಿದ್ದಾರೆ. ಅಂಥವರನ್ನು ಮಾಡುವುದರಿಂದ ಸಬಾರ್ಡಿನೇಟ್ ಆಫೀಸರ್ಸ್ ವೈಸ್ ಛಾನ್ಸಲರನ್ನು ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಕೇಳುವುದಕ್ಕಾಗುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಗಲಾಟೆಗಳು ಜಾಸ್ತಿ. ಅನ್ಯಾಯಗಳು ನಡೆಯುತ್ತವೆ. ಆದುದರಿಂದ ರೆಪ್ರೆಸಂಟೇಷನ್ ಬಗ್ಗೆ ಸರ್ಕಾರದ ಜೊತೆ ಕನ್‌ಸಲ್ಟೇಷನ್ ಮಾಡುವುದು ಇರಲಿ, ಮಾಡಿದಾಗ ಸರ್ಕಾರದವರು ಈ ದೃಷ್ಟಿಯಿಂದ ಎಜುಕೇಟೆಡ್ ಪೀಪಲ್, ಅನುಭವ ಇರತಕ್ಕವರು ಬೇಕಾದಷ್ಟು ಇರುವಾಗ ಅಂಥ ನಾನ್ ಅಫಿಷಿಯಲ್ ಮೆಂಬರ್ಸ್‌ಅನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:– ನಿಮ್ಮ ಸಲಹೆಯನ್ನು ಈಗ ತಾನೇ ಒಪ್ಪಿದ್ದೇನೆ. ಸರ್ಕಾರದ ಪಾಲಿಸಿ ಕೂಡ ಅದು ಇದೆ. ಸ್ಟ್ಯಾಫ್ ಹಾಕಬಾರದು. ಅವರು ಧೈರ್ಯದಿಂದ ಮಾತನಾಡುವುದಕ್ಕೆ ಬರುವುದಿಲ್ಲವೆಂದು ಇದೆ. ಏತಕ್ಕೆ ಈ ರೀತಿ ಆಗುತ್ತಿದೆ ಎಂದು ಹೇಳಿದೆ. ಪ್ರೊಸೀಜರ್‌ನಲ್ಲಿ ವೈಸ್ ಛಾನ್ಸಲರ್, ಛಾನ್ಸಲರನ್ನು ಕೇಳಿ ಮಾಡುತ್ತಾರೆ. ಕಾನೂನಿಗೆ ತಿದ್ದುಪಡಿ ಮಾಡಿ Chancellor in consultation with the State Government ಎಂದು ಹೇಳಿದರೆ ನಾವು ನೋಡಿ ಸರಿಯಾಗಿ ಮಾಡಲಿಕ್ಕೆ ಬರುತ್ತದೆ. ನಿಮ್ಮ ಅಭಿಪ್ರಾಯ ಏನಿದೆ ಅದನ್ನು ಒಪ್ಪುತ್ತೇನೆ.

ಸರ್ಕಾರಿ ನೌಕರರಿಗೆ ಕಡ್ಡಾಯವಾಗಿ ಕುಟುಂಬ ಯೋಜನೆ

310 (1907): ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗ):–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರಿ ನೌಕರರು ಹಾಗೂ ಸರ್ಕಾರಿ ಅನುದಾನಿತ ಸಂಸ್ಥೆಗಳು ಹಾಗೂ ಎಲ್ಲಾ ನಿಗಮ ಮಂಡಳಿಗಳಲ್ಲಿ ಇನ್ನು ಮುಂದೆ ನೇಮಕಾತಿ ಹೊಂದಲಿರುವ ನೌಕರರಿಗೆ ಕಡ್ಡಾಯವಾಗಿ ಒಂದು ಮಗು ಇರಲೇಬೇಕು ಎಂಬಂತೆ ಕುಟುಂಬ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಉದ್ದೇಶಿಸಲಾಗಿದೆಯೆ;